ಯಜಮಾನರು ಅಡ್ಡವಾಗಿರದಿದ್ದರೆ'– ರಾವ್‌ಜೀಭಾಯಿಯ ವಾಕ್ಯ ಮುಗಿಯುವ ಮೊದಲೇ ದೂರ ಒಳಗಿಂದ ದನಿ ಕೇಳಿಸಿತು: 'ಧೋಂಡೂ, ಅವರನ್ನು ಒಳಗೆ ಬರಲು ಹೇಳು. ಹಾಲಿನಲ್ಲಿ ಕುಳ್ಳರಿಸಿಕೋ. ಫ್ಯಾನು ಹಾಕು. ದೊಡ್ಡ ಕಿಡಕಿಯ ಪರದೆ ಸರಿಸು. ಈಗ ಬಂದೆ' ದನಿಯ ಮೇಲಿಂದಲೇ ಮಾತನಾಡಿಸಿದವರು ಸೆಕ್ರೆಟರಿಯ ಅಜ್ಜನಿರಬೇಕು ಅನ್ನಿಸಿತು. ರಾವ್‌ಜೀಭಾಯಿಗೆ ಮಲಗುವ ಕೋಣೆಯಲ್ಲಿ ಇದ್ದಿರಬೇಕು. ದನಿಯಲ್ಲಿ ತನ್ನನ್ನು ಕಾಣುವ ಉತ್ಸುಕತೆ ಉತ್ಸಾಹ ಇದ್ದುದನ್ನು ಗಮನಿಸಿದವನಿಗೆ ತೀರ ಅಡ್ನಾಡಿ ಹೊತ್ತಿಗೆ ಬಂದಿಲ್ಲ ಹಾಗಾದರೆ ಎಂದು ತೋರಿ ಖುಶಿಯಾಯಿತು.

ತಮ್ಮ ಮನೆಯ ದಿವಾಣಖಾನೆಯಷ್ಟೇ ದೊಡ್ಡದಾದ ದಿವಾಣಖಾನೆ. ಫರ್ನಿಚರ್ ಸಜ್ಜಿಕೆ ಹೆಚ್ಚಿನ ಆಡಂಬರವಿಲ್ಲದೆಯೆ ಕಲಾತ್ಮಕವಾಗಿತ್ತು. ಮನೆಯ ಮಂದಿ ಒಳ್ಳೆಯ ಕಲಾಭಿರುಚಿಯವರಿರಬೇಕು ಅನ್ನಿಸಿತು: ಕಿಡಕಿಗೆ ಹಾಕಿದ ಪರದೆಗಳು, ನೆಲಕ್ಕೆ ಹಾಕಿದ ರತ್ನಗಂಬಳಿ ಕಣ್ಣಿಗೆ ತಂಪು ನೀಡುವ ಶಾಂತ ಬಣ್ಣದವಾಗಿದ್ದವು. ಸೋಫಾ ಕುರ್ಚಿಗಳು ಬಹಳ ಹಳೆಯ ಶೈಲಿಯವಾಗಿಯೂ ಕೂರಲು ಆರಾಮ ಒದಗಿಸುವಂತಹವಾಗಿದ್ದುವು. ಹಾಲಿನ ಇನ್ನೊಂದು ಕೊನೆ ಊಟದ ಜಾಗವಿರಬೇಕು; ಡೈನಿಂಗ್ ಟೇಬಲ್, ಕುರ್ಚಿಗಳು, ಬದಿಯ ಕಾಜಿನ ಕದಗಳುಳ್ಳ ಕಪಾಟು ಎಲ್ಲ ಹಳೆಯ ಮಾದರಿಯವೇ. ಗೋಡೆಯ ಮೇಲೆ ದಪ್ಪವಾದ ಕಟ್ಟಿಗೆಯ ಫ್ರೇಮ್ ಉಳ್ಳ ದೊಡ್ಡದೊಂದು ತೈಲಚಿತ್ರ; ತೆಂಗಿನ ಮರಗಳಿಂದ ಶೋಭಿತವಾದ ಸಮುದ್ರದಂಡೆ. ದೂರ ದಿಗಂತದಲ್ಲಿ ಕೆಂಪಗೆ ಹೊಳೆಯುವ ಅಸ್ತಕ್ಕೆ ನಡೆದ ಸೂರ್ಯಗೋಲ. ಅದರ ಬೆಳಕಿನಲ್ಲಿ ಬೆಳಗಿಕೊಂಡ ಆಕಾಶದಲ್ಲಿ ಗರಿ ಬಿಚ್ಚಿ ಹಾರುತ್ತಿದ್ದ ಜೋಡು ಹಕ್ಕಿಗಳು. ದೇವರ ಪಟಗಳು ಮೂರ್ತಿಗಳಿಗಾಗಿ ಹುಡುಕುತ್ತಿದ್ದಂತಿದ್ದ ರಾವ್‌ಜೀಭಾಯಿಗೆ ಅವುಗಳು ಕಾಣದೇ ಇದ್ದಾಗ ತುಸು ನಿರಾಸೆಯಾಯಿತು. ಈ ಮನೆಯ ನಿವಾಸಿಗಳು ಎಂತ ಜನವೋ ಎಂದು ಕುತೂಹಲಪಟ್ಟ ರಾವ್‌ಜೀಭಾಯಿಗೆ ಮನಸ್ಸಿಗೆ ಬಂದವರು ಎರಡೇ ಬಗೆಯ ಜನ: ಈಶ್ವರನಲ್ಲಿ ನಂಬಿಕೆ ಇದ್ದವರು, ಇಲ್ಲದವರು. ರಾವ್‌ಜೀಭಾಯಿ ಸ್ವತಃ ತಾನು ಕೃಷ್ಣನ ಭಕ್ತನು. ಅವನ ಮನೆಯ ದಿವಾಣಖಾನೆ ಕೃಷ್ಣನ ಹಲವು ಬಗೆಯ ಚಿತ್ರಗಳಿಂದ, ಮೂರ್ತಿಗಳಿಂದ ತುಂಬಿಕೊಂಡಿತ್ತು.

ಧೋಂಡೂ ಒಳಗೆ ಹೋಗಿ ಸ್ಟೇನ್‌ಲೆಸ್ ಸ್ಟೀಲ್ ಪೇಲೆಯೊಂದರಲ್ಲಿ ನೀರು ತಂದು ರಾವ್‌ಜೀಭಾಯಿಯ ಇದಿರಿನ ಟೀಪಾಯಿಯ ಮೇಲೆ ಇರಿಸುತ್ತ 'ಅಜ್ಜಾ ಅವರು ಈಗ ಬರುತ್ತಾರೆ. ಡ್ರೆಸ್ಸು ಬದಲಿಸುತ್ತಿದ್ದಾರೆ' ಎಂದು ಸುದ್ದಿ ಕೊಟ್ಟಾಗ ಖುಶಿಯಾಯಿತು. 'ಸಾವಕಾಶ ಬರಲಿ, ಕೂರುತ್ತೇನೆ' ಎಂದು ಕೂತಲ್ಲೇ ಒಮ್ಮೆ ಕುಂಡೆ ಸರಿಸಿ, ನೀರಿನ ಪೇಲೆಯನ್ನೆತ್ತಿ ನೀರು ಕುಡಿದ. ನೀರುಕೊಟ್ಟು ಬರಮಾಡಿಕೊಂಡ ರೀತಿ ಮನಸ್ಸಿಗೆ ಹಿಡಿಸಿತು. 'ಡ್ರೆಸ್ಸು ಬದಲಿಸುತ್ತಿದ್ದಾರೆ' ಎನ್ನುವಾಗ ಧೋಂಡೂ ತನ್ನ ಉಡುಪಿನತ್ತ ನೋಡಿದ್ದು ನೆನಪಾದವನ ಹಾಗೆ– 'ನನ್ನನ್ನು ಕೇಳಿ ಒಬ್ಬ ಹುಡುಗ ಕೆಳಗೆ ಬಂದಿದ್ದ. ಚೌಕಿದಾರ ಅವನನ್ನು–' ತಾನು ಉಟ್ಟ ಬಟ್ಟೆಯಲ್ಲೇ ಕೆಳಗೆ ಓಡಲು ಕಾರಣವಾದ ಸಂದರ್ಭವನ್ನು ಮುಂದೆ ನಿಂತು ತನ್ನನ್ನೇ ನೋಡುತ್ತಿದ್ದ ಧೋಂಡೂಗೆ ವಿವರಿಸುತ್ತಿದ್ದ ಹಾಗೆಯೆ ಆಗ ಒಳಗಿನಿಂದಲೇ ತನ್ನನ್ನು ಸ್ವಾಗತಿಸಿದ ವಯೋವೃದ್ಧನು ಅವನ ಹಿಂದೆಯೇ ಅವನ ಹೆಂಡತಿಯಂತೆ ತೋರುವ ತುಸು ಬೆನ್ನು ಬಾಗಿದ ಹೆಂಗಸು ಹಾಲಿನಲ್ಲಿ ಕಾಲಿಡುತ್ತಿದ್ದುದು ಕಂಡಿದ್ದರಿಂದ ಬಾಯೊಳಗಿನ ವಾಕ್ಯ ಅರ್ಧಕ್ಕೇ ಉಳಿಯಿತು. ಕೆಲಸದ ಆಳು ಧೋಂಡೂ ತನಗಿನ್ನು ಇಲ್ಲಿ ಕೆಲಸವಿಲ್ಲ ಎಂದು ಮನಗಂಡವನ